ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಕೇಳಿಕೊಂಡಿದ್ದರು. ಈ ವರದಿಯು ಈವರೆಗೆ ಸರ್ಕಾರಕ್ಕೆ ಬಂದಿರುವುದಿಲ್ಲ. ಈ ಮಧ್ಯೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕಿಂಕೊ ಸಂಸ್ಥೆಯನ್ನು ತನ್ನದಾಗಿಸಿಕೊಳ್ಳಲು ಮುಂದೆ ಬಂದಿದೆ.

ಇದೆಲ್ಲ ವಿಷಯಗಳು ಸರ್ಕಾರದ ಸಧ್ಯದ ಪರಿಶೀಲನೆಯಲ್ಲಿದೆ. ಇದನ್ನೆಲ್ಲ ಸಂಬಂಧಪಟ್ಟ ವರೊಂದಿಗೆ, ಹಣಕಾಸು ಇಲಾಖೆ ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಹಾಗೂ ಬಿ.ಐ.ಎಫ್.ಆರ್. (B.I.F.R) ಸಂಸ್ಥೆಯೊಂದಿಗೆ ಸಮಾಲೋಚನೆ ನಡೆಸಿ ಆದಷ್ಟು ಬೇಗನೆ ಸರ್ಕಾರವು ಒಂದು ವಿಧಾನವನ್ನು ತೆಗೆದುಕೊಳ್ಳುವುದು.

4. ಇಲಾಖಾ ನೇಮಕಾತಿ ಸಮಿತಿಗಳ ಪುನರ್ರಚನೆಗೆ ಒತ್ತಾಯ.

ಶ್ರೀ ಪಿ. ಬಸವರಾಜ್ (ಬಹ್ಮಾವರ):- ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಹಿತದೃಷ್ಟಿಯಿಂದ ಮತ್ತು ಇಲಾಖೆಗಳ ಕೆಲಸ ಕಾರ್ಯಕ್ಕೆ ಅನುಕೂಲವಾಗಲು ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು, ಅಧಿಕಾರಿ ಮತ್ತು ಅಧಿಕಾರೇತರ ಸದಸ್ಯರನ್ನೊಳಗೊಂಡ ಇಲಾಖಾ ನೇಮಕಾತಿ ಸಮಿತಿಗಳನ್ನು ರಚಿಸುವ ಪರಿಹಾರ ಈ ಹಿಂದೆ ಇರುತ್ತಿದ್ದು ಇತ್ತೀಚೆಗೆ ಕೆಲ ವರ್ಷಗಳಲ್ಲಿ ಹಲವು ಇಲಾಖೆಗಳ ನೇಮಕಾತಿ ಸಮಿತಿಗಳು ಪುನರ್ರಚನೆಯಾಗದೆ ಇಲಾಖೆಗಳಲ್ಲಿ ಅನೇಕ ಹುದ್ದೆಗಳು ಖಾಲಿ ಇರುತ್ತಿದ್ದು ಸಾರ್ವಜನಿಕರ ಕೆಲಸಕಾರ್ಯಗಳಿಗೆ ಅಡಚಣೆ ಉಂಟಾಗುತ್ತಿದೆ. ಇನ್ನೊಂದು ಕಡೆ ಪಶುಸಂಗೋಪನ ಮತ್ತು ಪಶುವೈದ್ಯಕೀಯ ಇಲಾಖೆಯ ಇಲಾಖಾ ನೇಮಕಾತಿ ಸಮಿತಿಯನ್ನು 1992ರ ಅಕ್ಟೋಬರ್‌ನಲ್ಲಿ ಸರಕಾರವು ಪುನರ್ ರಚಿಸಿರುತ್ತಿದ್ದು ಇದರಲ್ಲಿ ಕೇವಲ ಅಧಿಕಾರಿ ಸದಸ್ಯರನ್ನು ಮಾತ್ರ ಒಳಗೊಂಡಿದ್ದು ಅಧಿಕಾರೇತರ ಸದಸ್ಯರನ್ನು ಕೈಬಿಡಲಾಗಿದೆ. ಇದರಿಂದ ಸಾರ್ವಜನಿಕ ಪ್ರಮುಖರಿಗೆ ಮತ್ತು ಪರಿಣತರಿಗೆ ಸಂಬಂಧಪಟ್ಟ ಇಲಾಖೆಗಳ ನೇಮಕಾತಿ ಸಮಿತಿಗಳಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ನಿರಾಕರಿಸಿದಂತಾಗಿದೆ. ಇಂಥ ನೇಮಕಾತಿ ಸಮಿತಿಗಳನ್ನು ರಚಿಸುವ ಸರಕಾರದ ಮೂಲ ಉದ್ದೇಶಕ್ಕೆ ಅನುಗುಣವಾಗಿಲ್ಲ.

ಎಲ್ಲಾ ಇಲಾಖೆಗಳಲ್ಲಿ ಅಧಿಕಾರೇತರ ಸದಸ್ಯರನ್ನೊಳಗೊಂಡಂಥ ಇಲಾಖಾ ನೇಮಕಾತಿ ಸಮಿತಿಗಳನ್ನು ಪುನರ್ ರಚಿಸಬೇಕೆಂದು ಮತ್ತು ಈಗಾಗಲೇ ಅಧಿಕಾರೇತರ ಸದಸ್ಯರನ್ನು ಬಿಟ್ಟು ರಚಿಸಿದ ನೇಮಕಾತಿ ಸಮಿತಿಗಳನ್ನು ಸಾರ್ವಜನಿಕ ಹಿತದೃಷ್ಟಿಯಲ್ಲಿ ಪುನರ್ ರಚಿಸಬೇಕೆಂದು ಮುಖ್ಯಮಂತ್ರಿಗಳನ್ನು ಈ ಮೂಲಕ ಒತ್ತಾಯ ಪಡಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ):- ಮಾನ್ಯ ಅಧ್ಯಕ್ಷರೆ, ಮುಂದಿನ ವಿಷಯವನ್ನು ಚರ್ಚೆ ಮಾಡುವುದಕ್ಕೆ, ಅಂದರೆ ನೆರೆಹಾವಳಿ ಬಗ್ಗೆ ಚರ್ಚೆ ಮಾಡುವುದಕ್ಕೆ ಮುಂಚೆ ಕೆಲವು ವಿಧೇಯಕಗಳನ್ನು ಮಂಡಿಸುವುದು ಉತ್ತಮ. ಏಕೆಂದರೆ ಇದನ್ನು ಮಾಡದೇ ಇದ್ದರೆ ನಾಳೆ ವಿಧಾನಪರಿಷತ್ತಿನಲ್ಲಿ ಕೆಲಸ ಇರುವುದಿಲ್ಲ. ಈಗ ಇವುಗಳನ್ನು ಇಲ್ಲಿ ಪಾಸ್ ಮಾಡಿ ಕಳುಹಿಸಿದರೆ, ಸಂಜೆ ಎಷ್ಟು ಹೊತ್ತು ಬೇಕಾದರೂ ನೆರೆಹಾವಳಿ ಬಗ್ಗೆ ಚರ್ಚೆ ಮಾಡಬಹುದು.

ಶ್ರೀ ಪಿ. ಬಸವರಾಜ್:- ಅಧ್ಯಕ್ಷರೆ, ನನಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು:- ಉತ್ತರವನ್ನು ಕಳುಹಿಸಿಕೊಡುತ್ತಾರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಹೌದು, ಉತ್ತರ ಕಳಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡಿದ್ದರ ಪ್ರಕಾರ ಬಿಲ್‌ಗಳನ್ನು ಪಾಸ್ ಮಾಡಿ ಕೊಟ್ಟಿದ್ದೇವೆ. ರೈತರ ಸಮಸ್ಯೆ ಬಂದಾಗ ಬೇರೆಬೇರೆ ಕಾರಣಗಳಿಂದ ಅದು ಮುಂದೆ ಹೋಗುತ್ತಿದೆ. ಈ ವಿಚಾರ ಪ್ರಾರಂಭದಲ್ಲೇ

ಚರ್ಚೆಯಾಗಬೇಕಾಗಿದ್ದರೂ, ವಿಳಂಬವಾಗಿದೆ. ಬಿಲ್ ನಂತರ ತೆಗೆದುಕೊಳ್ಳಬಹುದು. ಅವರು ಎರಡು ದಿನ ಕುಳಿತುಕೊಳ್ಳುತ್ತಾರೆ. ಆದ್ದರಿಂದ ಈಗ ಆದ್ಯತೆ ಮೇರೆಗೆ ನೆರೆಹಾವಳಿ ಬಗ್ಗೆ ಚರ್ಚೆ ಮಾಡಬೇಕೆಂದು ನಾನು ವಿನಂತಿಮಾಡುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಕಮಿಟಿಯಲ್ಲಿ ತೀರ್ಮಾನವಾಗಿದೆ. ಇದು ಶುಕ್ರವಾರವೇ ಮುಗಿಯಬೇಕಾಗಿತ್ತು. ಇವತ್ತು ಆಗದೇ ಇದ್ದರೆ ನಾಳೆ ವಿಧಾನ ಪರಿಷತ್ತಿನಲ್ಲಿ ಕೆಲಸ ಉಳಿಯುವುದಿಲ್ಲ. ಆದ್ದರಿಂದ ಇವತ್ತಿನೊಳಗೆ ಇದನ್ನು ಮುಗಿಸಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಇದು ಎಷ್ಟು ಪ್ರಾಮುಖ್ಯವಾದ ವಿಷಯವೆಂದು ನಾವು ಹೇಳಿದ್ದೇವೆ, ತಾವು ಕೂಡ ಒಪ್ಪಿಕೊಂಡಿದ್ದೀರಿ. ಆ ಸದನದಲ್ಲಿ ಕೆಲಸ ಕಾರ್ಯಗಳು ಇಲ್ಲವೆಂದು ಹೇಳಿ ಇಲ್ಲಿ ನೆರೆಹಾವಳಿ ಬಗ್ಗೆ ಚರ್ಚೆಯನ್ನು ತಳ್ಳಿಹಾಕಿ ಬೇರೆ ವಿದೇಯಕಗಳನ್ನು ತೆಗೆದುಕೊಳ್ಳುವುದು ಸರಿಯಲ್ಲ. ನೆರೆಹಾವಳಿ ಬಗ್ಗೆ ಮೊದಲು ಚರ್ಚೆಯಾಗಬೇಕು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ತಳ್ಳಿ ಹಾಕುವುದಲ್ಲ. ಇದರ ಬಗ್ಗೆ ಎಷ್ಟು ಬೇಕಾದರೂ ಮಾತನಾಡಿ. ಎರಡೂ ಸದನಗಳ ಕಾರ್ಯಕಲಾಪಗಳು ಶೀಘ್ರವಾಗಿ ನಡೆಯಬೇಕು.

ಶ್ರೀ ಬಸವರಾಜ ರಾಯರೆಡ್ಡಿ:- ಮಾನ್ಯ ಅಧ್ಯಕ್ಷರೆ, ನೆರೆಹಾವಳಿ ಬಗ್ಗೆ ಚರ್ಚೆ ಮಾಡಿ ಏಕೆಂದರೆ, ನೆರೆಹಾವಳಿ ವಿಚಾರದಲ್ಲಿ ಏನಾಗಿದೆ ಎಂದರೆ, ಇವತ್ತು ಉದಾಹರಣೆಗೆ ಬಳ್ಳಾರಿ, ರಾಯಚೂರು ಜಿಲ್ಲೆಯಲ್ಲಿ ರಸ್ತೆಗಳು ಕೊಚ್ಚಿ ಹೋಗಿವೆ, ಈ ರಸ್ತೆಗಳಿಗೆ ಸರ್ಕಾರದವರು ಇಲ್ಲಿಯವರೆಗೂ ಒಂದು ರೂಪಾಯಿ ಕೊಟ್ಟಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಬಸ್ಸುಗಳ ಸಂಚಾರ ನಿಂತು ಹೋಗಿವೆ. ಈಗೆ ಒಂದು-ಒಂದೂವರೆ ತಿಂಗಳಿಂದ ಬಸ್ಸುಗಳ ಸಂಚಾರ ನಿಂತು ಹೋಗಿದೆ. ಕೇವಲ ಬೆಳೆ ಪರಿಹಾರಕ್ಕೆ ಕೊಟ್ಟಿದ್ದಾರೆ, ಮನೆ ಬಿದ್ದವರಿಗೆ ಪರಿಹಾರ ಕೊಟ್ಟಿದ್ದಾರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತಾವೇ ತೀರ್ಮಾನ ಮಾಡಿದ್ದೀರಿ.

ಶ್ರೀ ಬಸವರಾಜ ರಾಯರೆಡ್ಡಿ:- ನೆರೆಹಾವಳಿ ಬಗ್ಗೆ ಸಂಪೂರ್ಣವಾದ ಚರ್ಚೆಯಾದರೆ, ಗ್ರಾಮೀಣ ಪ್ರದೇಶಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ, ದಯಮಾಡಿ ಇದನ್ನು ತೆಗೆದುಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಇರತಕ್ಕಂಥ ಕಾರ್ಯಸೂಚಿ ಪ್ರಕಾರ, 3ನೇ ಕಾರ್ಯಕ್ರಮದ ಪ್ರಕಾರ, 68ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪಕಾಲಾವಧಿ ಚರ್ಚೆ ಎಂದು ಇದೆ. ಮೊದಲನೆಯದಾಗಿ, ರಾಜ್ಯದಲ್ಲಿ ಇತ್ತೀಚೆಗೆ ಉಂಟಾದ ಮಳೆ ಹಾಗೂ ಚರ್ಚೆ ಎಂದು ಇದೆ. ಇದನ್ನು ತಾವು ಕಾರ್ಯಾಸೂಚಿಯಲ್ಲಿ ಸೇರಿಸಿದ್ದೀರಿ. ಆದ್ದರಿಂದ ಕಾರ್ಯಸೂಚಿಯಲ್ಲಿ ಯಾವರೀತಿ ಇದೆಯೋ, ಅದೇ ರೀತಿ ಹೋಗತಕ್ಕದ್ದು ಸೂಕ್ತ. ನಾನು ಇದನ್ನು ಮಾರ್ಪಾಡು ಮಾಡಬಾರದು ಎಂದು ಇಲ್ಲ. ಮಾರ್ಪಾಡು ಮಾಡುವುದು ಯಾವಾಗ, ಬಹಳ ಮಹತ್ತರವಾದ ವಿಚಾರಗಳು ಇದ್ದರೆ, ಮಾರ್ಪಾಡು ಮಾಡಬಾರದು. ತಮಗೆ ಆ ಅಧಿಕಾರ ಇದೆ, ಈ ಸದನಕ್ಕೂ ಇದೆ. ಇವತ್ತು ಮಹತ್ತರವಾದ ವಿಷಯ ಯಾವುದು ಎಂದರೆ, ನಮ್ಮ ರಾಜ್ಯದಲ್ಲಿ ಆಗಿರತಕ್ಕಂಥ ಅಘಾಥವಾದ ನಷ್ಟ, ಜನರಿಗೆ ಆಗಿರತಕ್ಕ ತೊಂದರೆ, ಜಾನುವಾರುಗಳಿಗೆ ಆಗಿರತಕ್ಕ ಅನಾಹುತ, ಇದು ಮಹತ್ತರವಾದ ವಿಚಾರ ಆಗುತ್ತದೆ. ಆದ್ದರಿಂದ ಮಸೂದೆಗಳು ಏನಾದರೂ ಇದ್ದರೆ, ಅದನ್ನು ಬೇಡ ಎಂದು ಹೇಳುತ್ತಿಲ್ಲ; ಅವುಗಳನ್ನೂ ಚರ್ಚೆಗೆ ತೆಗೆದುಕೊಳ್ಳೋಣ. ಇದು ಮುಗಿದ ನಂತರ ಚರ್ಚೆಗೆ ತೆಗೆದುಕೊಳ್ಳೋಣ, ಇದು ಸರಿ ಎಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು:– ಪ್ರಸ್ತುತ ಕಾರ್ಯಸೂಚಿ ಪ್ರಕಾರ, ನೆರೆಹಾವಳಿ ಬಗ್ಗೆ ಮುಂದುವರಿದ ಚರ್ಚೆ ನಡೆಯಬೇಕು. ಅದನ್ನು ಸಂಸದೀಯ ಸಚಿವರು ಬೇಡ ಎಂದು ಹೇಳಲಿಲ್ಲ ಮತ್ತು ಇದರ ಮಹತ್ವವನ್ನು ಕಡೆಗಣಿಸಲಿಲ್ಲ. ಅವರು ಈ ಸದನಕ್ಕೆ ಮಾಡಿದಂಥ ಒಂದು ಸೀಮಿತವಾದ ಕೋರಿಕೆ ಏನೆಂದರೆ, ಅಕಾಮಡೇಷನ್ ಬೇಕು. ಏಕೆಂದರೆ ಅನಿವಾರ್ಯತೆ, ನಾಳೆ ಈ ಮನೆಯಿಂದ ಈ ಮಸೂದೆಗಳು ಪಾಸಾಗಿ, ಅನಂತರ ಆ ಮನೆಗೆ ಚರ್ಚೆಗೆ ಹೋಗಬೇಕಾಗುತ್ತದೆ. ಅದಕ್ಕೆ ಅರಿವು ಮಾಡಿಕೊಡುವುದಕ್ಕೆ, ಜೊತೆಗೆ ಶಾಸನ ರಚನೆಯನ್ನು ನೋಡಿದಾಗ, ಜಿಜ್ಞಾಸೆ ಇರತಕ್ಕ ವಿಧೇಯಕಗಳು ನನಗೇನೂ ಕಾಣಲಿಲ್ಲ. ಆದ್ದರಿಂದ ಜಿಜ್ಞಾಸೆಗೆ ಒಳಪಡದೇ ಇರುವ ವಿಧೇಯಕಗಳನ್ನು ತಾವು ದೊಡ್ಡ ಮನಸ್ಸು ಮಾಡಿ, ಅನಿವಾರ್ಯತೆಯನ್ನೂ ಗಮನದಲ್ಲಿಟ್ಟು, ಆ ಮನೆಗೂ ಅನುಕೂಲವಾಗತಕ್ಕ ರೀತಿಯಲ್ಲಿ ಎಂದು ಸದನಗಳಿಗೂ ಕೆಲಸ ಸಮತೂಕವಾಗಿ, ಜವಾಬ್ದಾರಿಯಿಂದ, ಹೊಣೆಗಾರಿಕೆಯನ್ನು ಹರಿಸತಕ್ಕ ರೀತಿಯಲ್ಲಿ ಸಹಕಾರ ಕೊಡಿ ಎಂದು ಕೋರಿದ್ದಾರೆ. ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಸಾಕಷ್ಟು ಸಹಕಾರ ಕೊಟ್ಟಿದ್ದೇವೆ. ಈಗಾಗಲೇ 6–7 ಬಿಲ್ ಪಾಸ್ ಆಗಿವೆ. ಹಾಗಾಗಿ, ಈ ಬಿಲ್‌ಗೆ ನಾವು ಸಹಕಾರ ಕೊಡಬಾರದು ಎಂಬ ಉದ್ದೇಶ ಇಲ್ಲ. ಆದರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೆರೆಹಾವಳಿ ಚರ್ಚೆಯಾಗಲಿ ಅನಂತರ ಬಿಲ್ ತೆಗೆದುಕೊಳ್ಳಬಹುದು. ಇದಾದ ನಂತರ ಗೊಬ್ಬರದ ವಿಷಯ ಚರ್ಚೆ ಮಾಡಬಹುದು.

ಅಧ್ಯಕ್ಷರು:– ಕಾರ್ಯಸೂಚಿಯಲ್ಲಿ ಹಾಗೆಯೇ ಇರುವುದು. ನೆರೆಹಾವಳಿಯಾದ ಮೇಲೆ ಶಾಸನ ರಚನೆ.... ಅನಂತರ ಗೊಬ್ಬರದ ವಿಷಯ, ನಂತರ ಬಿಲ್ಲುಗಳು ಇವೆ. ಹಾಗಾಗಿ, ತಮ್ಮಲ್ಲಿ ವಿನಂತಿ ಏನೆಂದರೆ, ನೆರೆ ಹಾವಳಿ ಚರ್ಚೆ ಮುಗಿಯಲಿ, ಆದರ ನಂತರ ಬಿಲ್ಲುಗಳನ್ನು ತೆಗೆದುಕೊಳ್ಳಬಹುದು, ನಂತರ, ಗೊಬ್ಬರದ ವಿಷಯ ತೆಗೆದುಕೊಳ್ಳಬಹುದು. 13ನೇ ತಾರೀಖಿನವರೆಗೂ ಕೌನ್ಸಿಲ್ ಇದೆ. ಆದ್ದರಿಂದ ತೊಂದರೆ, ಕಷ್ಟ ಏನೂ ಆಗುವುದಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಸಭಾಧ್ಯಕ್ಷರಿಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ನನ್ನ ಅರಿಕೆ ಏನೆಂದರೆ, ಇವತ್ತು ಯಾವುದಾದರೊಂದು ಕಾಲವನ್ನು ನಿಗದಿ ಮಾಡಿ, ಇವತ್ತೆ ಸಭೆ ಮುಗಿಯುವುದರೊಳಗಾಗಿ, ಈ ವಿಧೇಯಕಗಳು ಸದನದ ಪರಿಶೀಲನೆಗೆ ಒಳಪಟ್ಟು ಈ ಕಾರ್ಯ ಮುಗಿಯಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:– ಸಂಜೆ ಐದೂವರೆ ಗಂಟೆಗೆ ಬೇಕಾದರೆ ಬಿಲ್ಲುಗಳನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು:– ಸಂಜೆ 5 ಗಂಟೆಗೆ ತೆಗೆದುಕೊಳ್ಳೋಣ.

ನಿಯಮ 68ರ ಮೇರೆಗೆ ನೆರೆಹಾವಳಿಯಿಂದ ರೈತರಿಗೆ ತೊಂದರೆ ಮತ್ತು ಪರಿಹಾರ.

† ಶ್ರೀ ಬಿ. ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ, 68ನೇ ನಿಯಮದ ಮೇರೆಗೆ ಇತ್ತೀಚೆಗೆ ಉಂಟಾದಂತಹ ನೆರೆಹಾವಳಿಯಿಂದ ಈ ರಾಜ್ಯದ ರೈತರ ಮೇಲೆ ಏನು ದುಷ್ಪರಿಣಾಮವಾಗಿದೆ, ಶ್ರೀ ಸಾಮಾನ್ಯರ ಮೇಲೆ ಏನು ದುಷ್ಪರಿಣಾಮವಾಗಿದೆ ಅವರಿಗೆ ಬದುಕುವುದಕ್ಕೆ ಆಗದೇ ಇರುವಂತಹ ಉಸಿರು ಕಟ್ಟುವಂತಹ ಒಂದು ವಾತಾವರಣ ಏನು ಉಂಟಾಗಿದೆ, ಈ ಘಟನೆ ನಡೆದು ಈಗಾಗಲೇ 50 ದಿವಸಗಳು ಕಳೆದುಹೋಗಿವೆ. ಬಹಳ ತಿಂಗಳುಗಳ ನಂತರ ವಿಧಾನಸಭೆ ಅಧಿವೇಶನ ಪ್ರಾರಂಭವಾದಾಗ, ಅತ್ಯಂತ ಮಹತ್ವಕೊಟ್ಟು